ಚಾ.ಸಾಃ 1, ಪ್ರಾ.ಸಾಃ 1

**ಸಾಕ್ಷಿಯನ್ನು ದಿನಾಂಕಃ 26-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

1 ನೇ ಆರೋಪಿ ನನಗೆ ಹಲ್ಲೆ ಮಾಡಲು ಬಳಸಿದ್ದ ಕಟ್ಟಿಗೆ ತುಂಡನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಆರೋಪಿತರು ನನಗೆ ಹಲ್ಲೆ ಮಾಡಿದ ದೊಣ್ಣೆ ಇದೇ ಆಗಿರಬಹುದು ಎಂದು ಗುರುತಿಸಿರುತ್ತಾರೆ. ಅದನ್ನು ಮುಮಾ-1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ- ಆರೋಪಿಗಳ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಆರೋಪಿತರು ನಮ್ಮ ಕೇರಿಯವರು. ಆರೋಪಿತರು ನೀವು ಮೊದಲಿನಿಂದಲೂ ಬಹಳ ಚೆನ್ನಾಗಿದ್ದೀರಾ ಎಂದರೆ ಅಷ್ಟೇನೂ ಚೆನ್ನಾಗಿರಲಿಲ್ಲ ಎನ್ನುತ್ತಾರೆ. ಈಗ್ಗೆ 4 ವರ್ಷಗಳಿಂದ ಅವರಿಗೂ ನಮಗೂ ಅಷ್ಟೇನೂ ಚೆನ್ನಾಗಿಲ್ಲ. ಆರೋಪಿತರು ಯಾವುದೇ ಕಾರಣ ಇಲ್ಲದಿದ್ದರೂ ಸಣ್ಣ ಪುಟ್ಟ ವಿಚಾರಗಳಿಗೆ ನನಗೆ ಮೊದಲಿನಿಂದಲೂ ಬೈಯ್ಯುತ್ತಿದ್ದರು. 4 ನೇ ಆರೋಪಿಯ ಅಣ್ಣ ನಮ್ಮ ಕೇರಿಯಲ್ಲಿ ಅಂಗಡಿ ಇಟ್ಟುಕೊಂಡಿದ್ದಾರೆ. ಆರೋಪಿತರು ನನಗೆ ಬೈಯ್ಯುತ್ತಿದ್ದರೂ ನಾನು ಪೋಲೀಸರಿಗೆ ದೂರು ನೀಡಿರುವುದಿಲ್ಲ. ಈ ಪ್ರಕರಣ ದಾಖಲಾದ ನಂತರ ಆರೋಪಿತರು ನನಗೆ ಬೈದಿದ್ದು ಆ ವಿಚಾರವಾಗಿ ದೂರು ಕೊಟ್ಟಿದ್ದೇನೆ. ನನಗೆ ಪ್ರತಿನಿತ್ಯ ಸಂಜೆ 07-00 ಗಂಟೆ ನಂತರ ಮದ್ಯಪಾನ ಮಾಡುವ ಹವ್ಯಾಸ ಇದೆ. ಮದ್ಯಪಾನ ಮಾಡಲು ಕವಲಕ್ಕಿ ಬಾರ್ ಗೆ ಹೋಗುತ್ತೇನೆ. ನನಗೆ ಮೋಟಾರು ಸೈಕಲ್ ಇಲ್ಲ. ನಮ್ಮ ಅಣ್ಣನ ಬೈಕ್ ತೆಗೆದುಕೊಂಡು ಹೋಗುತ್ತೇನೆ. ನಮ್ಮ ತಂದೆ ಮೇಲೆ ಮುಕುಂದ ನಾಗಪ್ಪ ಗೌಡ ಎನ್ನುವವರು ಜಾಗದ ವಿಚಾರವಾಗಿ ದಾವೆ ಮಾಡಿದ್ದಾರೆ. ನಮ್ಮ ತಂದೆ ಜಾಗದ ವಿಚಾರವಾಗಿ ಗಲಾಟೆ ಮಾಡಿದ್ದಾರೆ ಅಂತ ಅವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಆರೋಪಿತರು ಸದರಿ ದಾವೆಯ ವಿಚಾರವಾಗಿ ಮುಕುಂದ ನಾಗಪ್ಪ ಗೌಡರವರಿಗೆ ಸಹಾಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮುಕುಂದರವರ ವಿರುದ್ಧ ದೂರು ಕೊಟ್ಟಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ. ನಮ್ಮ ತಂದೆಯು ದೂರು ನೀಡಿರುವ ಪ್ರಕರಣದಲ್ಲಿ ನಾನು ಸಾಕ್ಷಿದಾರನಲ್ಲ. ಘಟನೆ ದಿನ 07-30 ರ ಸಮಯಕ್ಕೆ ಕವಲಕ್ಕಿಗೆ ಹೋಗಿದ್ದೆ. ಕವಲಕ್ಕಿಗೆ ಹೋಗಲು ಅರ್ಧಗಂಟೆ ಬೇಕು. ಹೋದವನೇ ಮದ್ಯಪಾನ ಮಾಡಿ ವಾಪಸ್ಸು ಬಂದಿರುತ್ತೇನೆ. ಬೈಕನ್ನು ಅರೆಯಲ್ಲಿ ನಿಲ್ಲಿಸಿ ಮನೆಯ ಹತ್ತಿರ ನಡೆದುಕೊಂಡು ಬರುತ್ತೇನೆ. ಪ್ರಕರಣದ ಘಟನೆ ನಡೆಯುವ ಮೊದಲು ಆರೋಪಿತರಿಗೂ ನನಗೂ ಯಾವುದೇ ಮಾತುಕತೆ ಆಗಿರಲಿಲ್ಲ. ನಮ್ಮ ಮನೆಗೆ ಹೋಗುವಾಗ 4 ನೇ ಆರೋಪಿಯ ಅಣ್ಣನ ಅಂಗಡಿಯನ್ನು ದಾಟಿ ಹೋಗಬೇಕು. ಘಟನೆ ನಡೆದ ದಿನ ನಾನು ಸದರಿ ಅಂಗಡಿ ಮುಂದೆ ಹೋಗುವಾಗ ಅಂಗಡಿಯ ಹತ್ತಿರ ಬಹಳ ಜನ ಇದ್ದರು. ನಮ್ಮ ದೊಡ್ಡಪ್ಪನ ಮಗ ಮಂಜುನಾಥ ಸಹ ಇದ್ದರು. ನಮ್ಮ ಮನೆಯಿಂದ ಸುಮಾರು 300 ಮೀಟರ್ ದೂರದಲ್ಲಿ ಸದರಿ ಅಂಗಡಿ ಇದೆ. ನಾನು ಸದರಿ ಅಂಗಡಿಯನ್ನು ದಾಟಿ ಮನೆಯ ಹತ್ತಿರಕ್ಕೆ ಬಂದು ಫೋನಿನಲ್ಲಿ ಮಾತನಾಡುತ್ತಿದ್ದೆ. ಆಗ ಆರೋಪಿತರು ಬಂದು ಗಲಾಟೆ ಮಾಡಿರುತ್ತಾರೆ. ನಾನು ಸದರಿ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದೆ. ಆಗ ಗಲಾಟೆಯಾಗಿರುತ್ತದೆ. ಬರುವಾಗ ದಾರಿಯಲ್ಲಿ ಸುಮಾರು

10 ನಿಮಿಷಗಳ ಕಾಲ ಫೋನಿನಲ್ಲಿ ಮಾತನಾಡಿಕೊಂಡು ಬಂದಿರುತ್ತೇನೆ. ಆರೋಪಿತರೂ ಸಹ ಅಂಗಡಿ ಕಡೆಯಿಂದ ನನ್ನ ಕಡೆಗೆ ಬಂದಿರುತ್ತಾರೆ. ನಾಲ್ಕೂ ಜನಗಳ ಪೈಕಿ 4 ನೇ ಆರೋಪಿ ಮೊದಲು ನನ್ನ ಬಳಿ ಬಂದಿರುತ್ತಾನೆ. ಆರೋಪಿತರು ನನ್ನ ಎದುರಿನಿಂದ ಬಂದು ನನ್ನ ಅಡ್ಡ ಹಾಕಲಿಲ್ಲ. ಹಿಂದಿನಿಂದ ಬಂದಿರುತ್ತಾರೆ. ದೂರನ್ನು ಪೋಲೀಸರು ಬರೆದಿರುತ್ತಾರೆ. ನಾನು ಫೋನಿನಲ್ಲಿ ಮಾತನಾಡಿಕೊಂಡು ನಿಂತಿದ್ದ ವಿಚಾರವನ್ನು ಪೋಲೀಸರಿಗೆ ಹೇಳಿಲ್ಲ. ಆರೋಪಿತರು ಹಿಂದಿನಿಂದ ಬಂದು ನನಗೆ ಅಡ್ಡ ಹಾಕಿದ್ದರು, ಈ ವಿಚಾರವನ್ನು ನಾನು ದೂರಿನಲ್ಲಿ ಹೇಳಿದ್ದೇನೆ. 4 ನೇ ಆರೋಪಿ ಬಂದವನು ನನ್ನ ಮೊಬೈಲನ್ನು ಕಸಿದುಕೊಂಡಿದ್ದರು, ಈ ವಿಚಾರವನ್ನು ನಾನು ಪೋಲೀಸರಿಗೆ ಹೇಳಿಲ್ಲ. ನಾನು ಮೊಬೈಲನ್ನು ಯಾಕೆ ಕಿತ್ತುಕೊಂಡಿರಿ ಎಂದು ಕೇಳಿರುತ್ತೇನೆ. ಆಗ 4 ನೇ ಆರೋಪಿ ಯಾವುದೇ ಉತ್ತರವನ್ನು ನೀಡಲಿಲ್ಲ. ನಾಲ್ಕೂ ಜನ ಆರೋಪಿತರೂ ಒಟ್ಟಿಗೇ ನನ್ನ ಬಳಿ ಬಂದಿರುತ್ತಾರೆ. 2 ನೇ ಆರೋಪಿ ನನಗೆ ಬೋಳಿಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆ ವೇಳೆಗೆ ಉಳಿದ 3 ಜನ ನನ್ನನ್ನು ದೂಡಿ ಹಾಕಿರುತ್ತಾರೆ. ದೊಣ್ಣೆಯಿಂದ ನನಗೆ ಹೊಡೆದ ನಂತರ ನಾನು ಕೂಗಾಡಿರುತ್ತೇನೆ. ನಾನು ದೂರಿನಲ್ಲಿ 1 ನೇ ಆರೋಪಿ ನನಗೆ ಕುಟಾರಿ ಕಾವಿನಿಂದ ಹೊಡೆದಿರುತ್ತಾನೆ ಎಂದು ಹೇಳಿ ಬರೆಸಿದ್ದೇನೆ. 2 ನೇ ಬಾರಿ ದೊಣ್ಣೆಯಿಂದ ಹೊಡೆದಿರುವುದಾಗಿ ಹೇಳಿದ್ದೇನೆ. ನನಗೆ ಹಲ್ಲೆ ಮಾಡಿದ ದೊಣ್ಣೆ ದುಂಡಾಗಿದ್ದದ್ದರಿಂದ ಮತ್ತು ರಾತ್ರಿ ಸಮಯ ಆಗಿದ್ದರಿಂದ ದೂರಿನಲ್ಲಿ ಅದು ಕುಟಾರಿ ಕಾವು ಅಂತ ತಿಳಿದು ಹೇಳಿ ಬರೆಸಿದ್ದೇನೆ. 2 ನೇ ಬಾರಿ ಹೇಳಿಕೆಯಲ್ಲಿ ದೊಣ್ಣೆ ಎಂದು ಹೇಳಿದ್ದೇನೆ. ತದನಂತರ ಅದು ಕುಟಾರಿ ಕಾವು ಅಲ್ಲ, ದೊಣ್ಣೆ ಅಂತ ನನಗೇ ಗೊತ್ತಾಯಿತು. ಆದ್ದರಿಂದ ಮರುಹೇಳಿಕೆ ನೀಡಿರುತ್ತೇನೆ. ಮರುಹೇಳಿಕೆಯನ್ನು ಆಸ್ಪತ್ರೆಯಲ್ಲೇ ಕೊಟ್ಟಿರುತ್ತೇನೆ. ಸದರಿ ದಾರಿಯಲ್ಲಿ ಲೈಟ್ ಇದೆ. ಆದರೂ ಹಲ್ಲೆ ಮಾಡಿದ ದೊಣ್ಣೆ ನಿಖರವಾಗಿ ದೊಣ್ಣೆ ಅಂತ ಗೊತ್ತಾಗಲಿಲ್ಲ, ಆದ್ದರಿಂದ ಅದನ್ನು ಕುಟಾರಿ ಕಾವು ಅಂತ ತಿಳಿದು ದೂರಿನಲ್ಲಿ ಅದೇ ರೀತಿ ಬರೆಸಿದ್ದೇನೆ. ಮುದ್ದೆಮಾಲು 1 ನ್ನು ಘಟನೆಯ ನಂತರ ಪುನಃ ನೋಡಲಿಲ್ಲ. ಹಲ್ಲೆ ಮಾಡುವ ಕಾಲಕ್ಕೆ ಮುಮಾ-1 ನ್ನು ನಾನು ನಿಖರವಾಗಿ ನೋಡಿರಲಿಲ್ಲ. ಅದೇ ಕಾರಣಕ್ಕೆ ಅದು ಕುಟಾರಿ ಕಾವು ಅಂತ ತಿಳಿದುಕೊಂಡಿದ್ದೇನೆ. ಘಟನೆ ನಡೆದ ಮುಮಾ-1 ನ್ನು ನಾನು ಪುನಃ ನೋಡಲಿಲ್ಲ. ಆದರೆ ಮುಮಾ-1 ನ್ನು ಇದೇ ಮೊದಲಬಾರಿಗೆ ನೋಡುತ್ತಿದ್ದೇನೆ. ಆರೋಪಿತರು ಹಲ್ಲೆ ಮಾಡಿದ ದೊಣ್ಣೆ ಮುಮಾ-1 ಕ್ಕಿಂತ ಸ್ವಲ್ಪ ದಪ್ಪ ಇತ್ತು.

ಗಲಾಟೆಯಾದಾಗ 10 ರಿಂದ 15 ಜನ ಸೇರಿದ್ದರು. ಅವರ ಪೈಕಿ ವೇದ ದುರ್ಗಪ್ಪ ನಾಯ್ಕ, ಲಕ್ಷ್ಮೀ ನಾರಾಯಣ ಗೌಡ, ಪಾರ್ವತಿ ಮಾದೇವ ನಾಯ್ಕ ಮತ್ತು ಇತರರು ಬಂದಿದ್ದರು. ನಮ್ಮ ತಂದೆಯವರು ಬಂದ ನಂತರ ಆರೋಪಿತರು ಓಡಿ ಹೋಗಿರುತ್ತಾರೆ. ಘಟನೆಯಾದ ನಂತರ ನಾನು ಸ್ಥಳದಲ್ಲಿ ಬಿದ್ದಿದ್ದಾಗ ಚಾಸಾ-7 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಿದ್ದರು. ನಮ್ಮ ತಂದೆಯವರು ಬಂದಾಗ ಆರೋಪಿತರು ಓಡಿ ಹೋಗಿರುತ್ತಾರೆ. ನಮ್ಮ ತಂದೆಯವರು ಆರೋಪಿತರು ಹಲ್ಲೆ ಮಾಡಿದ್ದನ್ನು ನೋಡಲಿಲ್ಲ. ದೂರು ನೀಡುವಾಗ ಸ್ಥಳದಲ್ಲಿದ್ದ ಎಲ್ಲಾ ಹೆಂಗಸರ ಹೆಸರು ಹೇಳಲಿಲ್ಲ. ದೂರನ್ನು ನಾನು ಆಸ್ಪತ್ರೆಯಲ್ಲಿದ್ದಾಗ ಬರೆಸಿದ್ದೇನೆ. ದೂರನ್ನು ನಾನು ಓದಲಿಲ್ಲ, ನನಗೆ ಓದಲು ಬರುವುದಿಲ್ಲ. ನಾನು ಘಟನೆಯ ಬಗ್ಗೆ ಒಂದಿಷ್ಟು ಮಾಹಿತಿಯನ್ನು ಹೇಳಿದ್ದೆ. ಪೋಲೀಸರು ದೂರನ್ನು

ಬರೆದುಕೊಂಡರು. ನನಗೆ ಸಹಿ ಹಾಕಲು ಹೇಳಿದರು, ನಾನು ಸಹಿ ಹಾಕಿದ್ದೇನೆ. ನಾನು ಹೇಳಿರುವಂತೆ ಆರೋಪಿತರು ನನಗೆ ಯಾವತ್ತೂ ಯಾವುದೇ ದೊಣ್ಣೆಯಿಂದ ಹಲ್ಲೆ ಮಾಡಿಲ್ಲ. ನಾನೇ ಮದ್ಯಪಾನ ಮಾಡಿ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ತಂದೆಯವರ ದಾವೆಯಲ್ಲಿ ತಂದೆಯವರ ವಿರುದ್ಧ ಸಹಾಯ ಮಾಡಿದ್ದರಿಂದ ಅದೇ ದ್ವೇಷದ ಕಾರಣಕ್ಕೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ. **Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**